O.S. ನಂಬರಃ 23/2018
ಪಿ. ಡಬ್ಲ್ಯೂ಼ 1

ದಿಃ 30-11-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಡಿ.ಕೆ.ಜೆ. ಇವರಿಂದಃ

ನಿಮ್ಮ ತಂದೆಯು ಕಟ್ಟಿದಂತಹ ಫಾರ್ಮ್ ಹೌಸ್ ಈಗಲೂ ಸಹ ಅಸ್ತಿತ್ವದಲ್ಲಿ ಇದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ರೀತಿ ನಿಮ್ಮ ತಂದೆಯವರು ಫಾರ್ಮ್ ಹೌಸನ್ನು ಕಟ್ಟಿರುತ್ತಾರೆ ಎಂದು ಮೊಟ್ಟ ಮೊದಲ ಬಾರಿಗೆ ನಿಮ್ಮ ಪಾಟೀ ಸವಾಲಿನಲ್ಲಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪತ್ನಿಯು ಕುಮಟಾದ ಅಕ್ಷರ ದಾಸೋಹದಲ್ಲಿ ಕೆಲಸ ಮಾಡುತ್ತಿರುವಾಗ APRON ಬಗ್ಗೆ ಮಿಸ್‌ಅಪ್ರೋಪ್ರಿಯೆಷನ್ ಆಗಿದ್ದ ಕಾರಣ ಸದರಿ ಪ್ರಕರಣಕ್ಕೆ ಓಡಾಡಲು ಪ್ರತಿವಾದಿಯ ಶಾಲೆಯಿಂದ ರೂ.5 ಲಕ್ಷದ ಮೊತ್ತದ ಸಹಾಯವನ್ನು ಕೇಳಿರುತ್ತೀರಿ ಎಂದರೆ ಸರಿಯಲ್ಲ. ಅವರು ಹಣದ ಸಹಾಯವನ್ನು ಮಾಡಿರುವುದಿಲ್ಲ ಎಂಬ ಒಂದೇ ಕಾರಣದಿಂದ ಪ್ರತಿವಾದಿಯರ ವಿರುದ್ಧ ತಿರುಗಿ ಬಿದ್ದು, ಘರ್ಷಣೆಗೆ ಬಿದ್ದಿರುತ್ತೀರಿ ಎಂದರೆ ಸರಿಯಲ್ಲ. ಈಗ ಪ್ರತಿವಾದಿಯ ಶಾಲೆಯ ಸಂಸ್ಥೆಯ ಪರಿಸ್ಥಿತಿ ಸರಿ ಇರುವುದಿಲ್ಲ, ಮುಂದೆ ಅನುಕೂಲವಾದಾಗ ಹಣದ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಒಂದು ಕಾರಣದಿಂದ ಪಹಣಿ ಪತ್ರಿಕೆಯಲ್ಲಿ ನಿಮ್ಮ ಹೆಸರು ಇದ್ದಿದ್ದರಿಂದ 2017 ನೇ ಸಾಲಿನಲ್ಲಿ ಸಿಂಡಿಕೇಟ್ ಬ್ಯಾಂಕಿನಿಂದ ಸಾಲವನ್ನು

ಪಡೆದುಕೊಂಡಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೃಷಿ ಸಾಲ ಎಂದು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 2017 ರಿಂದ ಇಂದಿನವರೆಗೂ ಸಹ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಮಾಡಿದ್ದು, ಮಧ್ಯದಲ್ಲಿ ಕೋವಿಡ್ ಬಂದಿದ್ದರಿಂದ ಮರುಪಾವತಿ ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ರೂ.6 ಲಕ್ಷ ಸಾಲ ತೆಗೆದುಕೊಂಡಿದ್ದು, ರೂ.1ಲಕ್ಷ ಮೊತ್ತವನ್ನು ಮರುಪಾವತಿ ಮಾಡಿದ್ದು, ಈಗ ಬಡ್ಡಿ ಸೇರಿಸಿ ಬಾಕಿ ಎಳುವರೆ ಅಥವಾ ಎಂಟು ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ನಿಮ್ಮ ಇಬ್ಬರು ಮಕ್ಕಳು ದುಡಿಯುತ್ತಾರೆ ಎಂದರೆ ಸರಿ. ನೀವು ಕಳೆದ ವರ್ಷ ನಿವೃತ್ತಿಯಾದ ನಂತರ ನಿಮಗೆ ಪಿಂಚಣಿ ಹಣ ಬಂದಿರುತ್ತದೆ ಎಂದರೆ ಸರಿ. ನಿಮ್ಮ ಪತ್ನಿಯವರು ದೊಡ್ಡ ಹುದ್ದೆಯಲ್ಲಿ ಇದ್ದರೂ ಸಹ, ಸಾಲವನ್ನು ಮರುಪಾವತಿ ಮಾಡಲು ಯೋಗ್ಯತೆ ಇದ್ದರೂ ಸಹ ಈ ಒಂದು ಪ್ರಕರಣ ಬಾಕಿ ಇರುತ್ತದೆ ಎಂಬ ಒಂದೇ ಕಾರಣದಿಂದ ಸಾಲವನ್ನು ದುರುದ್ದೇಶಪೂರಕವಾಗಿ ತೀರಿಸುತ್ತಿಲ್ಲ ಎಂದರೆ ಸರಿಯಲ್ಲ. ದಾವೆ ಮಾಡುವ ಒಂದು ವಾರದ ಪೂರ್ವದಲ್ಲಿ ನಿಮ್ಮ ದಾವೆಯಲ್ಲಿ ನಿಮ್ಮ ಹೊಲದಲ್ಲಿ ಟ್ರಕ್ ಮತ್ತು ಕೆಂಪು ಇಟ್ಟಿಗೆಗಳನ್ನು ತಂದು ಪ್ರತಿವಾದಿ ಸಂಸ್ಥೆಯು ಹಾಕಿರುತ್ತಾರೆ ಎಂದು ನಮೂದು ಮಾಡಿರುತ್ತೀರಿ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ದಾವೆಯಲ್ಲಿ ಪ್ರತಿವಾದಿಯ ಸಂಸ್ಥೆಯ ಸಮಾಜದ ವ್ಯಕ್ತಿಗಳು ಹಾಗೂ ಕೆಲಸಗಾರರನ್ನುಕರೆದುಕೊಂಡು ಬಂದು ನಿಮ್ಮ ಅತಕ್ರಮಣ ಮಾಡಿರುತ್ತಾರೆ ಎಂದು ಬರೆಸಿರುತ್ತೀರಾ ಅಥವಾ ಇಲ್ಲವಾ ಎಂದರೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಮ್ಮ ದಾವೆಯಲ್ಲಿ ಪ್ರತಿವಾದಿ

ಸಂಸ್ಥೆಯು ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದರು ಎಂದು ನಮೂದು ಮಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಇದಲ್ಲದೆ ಪ್ರತಿವಾದಿ ಸಂಸ್ಥೆಯು 50-60 ಗುಂಡಾಗಳನ್ನು ಕರೆದುಕೊಂಡು ಬಂದು ಜೋರು ಮಾಡಿರುತ್ತಾರೆ ಎಂದು ಬರೆಸಿರುತ್ತೀರೋ ಅಥವಾ ಇಲ್ಲವಾ ಎಂದರೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸಂಸ್ಥೆಯು ಗೌರವಾನ್ವಿತ ವಿದ್ಯಾಸಂಸ್ಥೆಯು ಆಗಿದ್ದರೂ ಸಹ 50-60 ಗುಂಡಾಗಳನ್ನು ಕರೆದುಕೊಂಡು ಬಂದು ಧಮಕಿ ಹಾಕಿರುತ್ತಾರೆ ಎಂದು ಸುಳ್ಳು ಮಾಹಿತಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ದಾವೆಯಲ್ಲಿ ಬರೆಸಿದಂತಹ ಯಾವುದೂ ಸಹ ನಡೆದಿರುವುದಿಲ್ಲ, ಕೇವಲ ಅವುಗಳನ್ನು ಕಾಲ್ಪಣಿಕವಾಗಿ ಬರೆಸಿರುತ್ತೀರಿ ಎಂದರೆ ಸರಿಯಲ್ಲ.

2. ನೀವು ನಿಮ್ಮ ದಾವೆಯಲ್ಲಿ ಬರೆದ ಪ್ರಕಾರ ಪ್ರತಿವಾದಿ ಸಂಸ್ಥೆಯು ದಾವಾ ಆಸ್ತಿಯನ್ನು ಕಬಳಿಸಲು ಒಂದು ಯೋಜನೆಯನ್ನು ಹಾಕಿರುತ್ತಾರೆ ಎಂದು ಬರೆಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ ಸಂಸ್ಥೆಯು ದಿಃ09-02-2018 ರಂದು ಕೇವೀಯಟ್ ಹಾಕಿದ್ದು, ಅದರ ಪ್ರತಿಯನ್ನು ನಿಮಗೆ ಕಳುಹಿಸಿಕೊಡಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ಕೇವೀಯಟ್ ಪ್ರತಿಯನ್ನು ತೋರಿಸಲಾಗಿ, ಅವರು ಅದನ್ನು ಒಪ್ಪಿಕೊಂಡಿದ್ದು, ಕೇವೀಯಟ್ ನ ಕಚೇರಿ ಪ್ರತಿಯನ್ನು ನಿಡಿ-3 ಎಂದು ಗುರುತಿಸಲಾಯಿತು. ಪ್ರತಿವಾದಿ ಸಂಸ್ಥೆಯು ಹಾಕಿದ ಕೇವೀಯಟ್ ಅರ್ಜಿಯಲ್ಲಿ ನಿಜ ಸಂಗತಿಯನ್ನು ತೋರಿಸಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮ್ಮ ಪತ್ನಿ

ಕುಮಟಾದಲ್ಲಿ ಕೆಲಸಕ್ಕೆ ಹಾಜರಾಗಿದ್ದರಿಂದ ಪ್ರತಿವಾದಿ ಸಂಸ್ಥೆಯ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲು ತಯಾರಿ ಮಾಡಿಕೊಳ್ಳುತ್ತೀದ್ದೀರಿ ಎಂದರೆ ಸರಿಯಲ್ಲ. ನಂತರ ಪ್ರತಿವಾದಿ ಸಂಸ್ಥೆಯವರು ಕೇವೀಯಟ್ ಸಲ್ಲಿಸಿದ 5 ದಿನಗಳಲ್ಲಿ ಸದರಿ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಪ್ರತಿವಾದಿ ಸಂಸ್ಥೆಯವರು ನಿಮಗೆ ಪರಿಚಯ ಇರದಿದ್ದರೂ ಸಹ ಅಕ್ಕಪಕ್ಕದ ಜಮೀನುಗಳನ್ನು ಬಿಟ್ಟು ಕೇವಲ ನಿಮ್ಮ ಜಮೀನಿನ ಮೇಲೆ ಯಾವ ಕಾರಣಕ್ಕಾಗಿ ಹಕ್ಕು ಸಾಧಿಸುತ್ತಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಎಲ್ಲ ಸಂಗತಿಗಳನ್ನು ನ್ಯಾಯಾಲಯದ ಮುಂದೆ ಮುಚ್ಚಿಡುತ್ತಿದ್ದೀರಿ ಎಂದರೆ ಸರಿಯಲ್ಲ. 1994 ನೇ ಸಾಲಿನಲ್ಲಿ ನೀವು ಮತ್ತು ನಿಮ್ಮ ತಂದೆಯವರು ಪ್ರತಿವಾದಿ ಸಂಸ್ಥೆಗೆ ದಾವಾ ಆಸ್ತಿಯನ್ನು ಕೊಡಲು ಸ್ವ-ಖುಷಿಯಿಂದ ಒಪ್ಪಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಒಪ್ಪಿಕೊಂಡ ನಂತರ ನಿಮಗೆ ಕೋಲಾರದಲ್ಲಿ ನೌಕರಿ ಸಿಕ್ಕಿದ್ದರಿಂದ ಅಲ್ಲಿಗೆ ಹೋಗಬೇಕಾಯಿತು ಎಂದರೆ ಸರಿ. ಆ ಕಾರಣದಿಂದ ಶಾಲೆಯ ವ್ಯವಹಾರದ ಸಲುವಾಗಿ ಮುಂದಿನ ಕೆಲಸ ಮಾಡಲು ನಿಮ್ಮ ತಂದೆಯವರು ನಿಮ್ಮನ್ನು ಬೆಂಗಳೂರಿಗೆ ಕರೆಯಿಸಿ ನಿಮ್ಮ ಹೆಸರಿಗೆ ಮೊಕ್ತಿಯಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ05-09-1994 ರಲ್ಲಿ ನಿಮ್ಮ ತಂದೆಯವರು ಸಂಪೂರ್ಣ ಹಣವನ್ನು ಪಡೆದುಕೊಂಡು ಶಾಲೆಯ ಹೆಸರಿನಲ್ಲಿ ಕರಾರು ಪತ್ರವನ್ನು ಬರೆದುಕೊಟ್ಟರು ಎಂದರೆ ಸರಿಯಲ್ಲ. ಪೂರ್ಣ ಹಣವನ್ನು ಪಡೆದುಕೊಂಡರೂ ಸಹ ಮೇಲಾಧಿಕಾರಿಗಳ ಪರವಾಣಿಗೆ ಅವಶ್ಯಕತೆ ಇದ್ದಿದ್ದ ಕಾರಣ ಕ್ರಯಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ನಿಮ್ಮ ತಂದೆಯವರು

ದಾವಾ ಜಮೀನಿನ ಕಬ್ಜಾವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಂಸ್ಥೆಯವರು ಸಾಕಷ್ಟು ಹಣ ಖರ್ಚು ಮಾಡಿ, ನೆಲವನ್ನು ಸಮತಟ್ಟು ಮಾಡಿಕೊಂಡು ಶಾಲೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಂಸ್ಥೆಯವರ ಶಾಲೆಯನ್ನು ಹೊರತುಪಡಿಸಿ ಅಕ್ಕಪಕ್ಕ ಬೇರೆ ಯಾವುದೇ ಶಾಲೆ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಇಂದಿಗೂ ಸಹ 150-200 ಜನ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಂಸ್ಥೆಯವರು ನಡೆಸುವ ವಿದ್ಯಾ ಸಂಸ್ಥೆಯನ್ನು ವೈಯಕ್ತಿಕವಾದ ಲಾಭಕ್ಕಾಗಿ ನಡೆಸುತ್ತಿಲ್ಲ ಎಂದರೆ ಗೊತ್ತಿರುವುದಿಲ್ಲ. ನಿಮ್ಮ ಪ್ರಕಾರ ಪ್ರತಿವಾದಿಯ ಸಂಸ್ಥೆಯವರು ಅತಿಕ್ರಮಣ ಮಾಡಿಕೊಂಡಿದ್ದರ ಬಗ್ಗೆ ನ್ಯಾಯಾಲಯಕ್ಕೆ ಅದನ್ನು ತೆರವು ಮಾಡಿ ಕಬ್ಜಾ ಕೊಡಿಸಲು ಕೇಳಿಕೊಂಡಿರುವುದಿಲ್ಲ ಎಂದರೆ ಸರಿ. ನಿಮ್ಮ ಹಿಂದಿನ ಹಾಗೂ ಈಗಿನ ಸಹಿಗಳನ್ನು ಗುರುತಿಸುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಲಾಗಿ, ಅದರ ಮೇಲಿರುವ ತಮ್ಮ ಸಹಿಯನ್ನು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ದಿಃ 17-08-1994 ರಂದು ಬರೆದುಕೊಟ್ಟ ಒಟ್ಟು ಮೋಕ್ತಿಯಾರನಾಮೆ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ಸಹಿ ಯಾವುದೂ ಸಹ ತನ್ನದು ಅಲ್ಲ ಎಂದು ನುಡಿಯುತ್ತಾರೆ. ನಿಮಗೆ ಈಗ ತೋರಿಸಿದಂತಹ ಕಾಗದ ಪತ್ರ ಬೆಂಗಳೂರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ತಂದೆಯವರು ಒಬ್ಬ ರಾಜನ್ನ ಎಂಬ ವಕೀಲರನ್ನು ಹಿಡಿದುಕೊಂಡು ಸದರಿ ಕಾಗದ ಪತ್ರವನ್ನು ತಯಾರು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಕಾಗದ ಪತ್ರವನ್ನು

ತಯಾರಿಸಿದ ನಂತರ ಶ್ರೀಮತಿ ನಾಗಲಕ್ಷ್ಮಿ ಎಂಬ ನೋಟರಿಯವರಿಂದ ನೋಟರಿ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ಈ ಎಲ್ಲ ಸಂಗತಿಗಳು ನಿಮಗೆ ಗೊತ್ತಿದ್ದರೂ ಹಾಗೂ ನಿಜ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ05-09-1994 ರಂದು ಮಾಡಿಕೊಟ್ಟಂತಹ ಕರಾರು ಪತ್ರವನ್ನು ತೋರಿಸಲಾಗಿ, ಅದರ ಮೇಲಿರುವ ಸಹಿಯು ಯಾರದ್ದು ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದು, ಅವರ ಸಹಿಯನ್ನು ನೀವು ಗುರುತಿಸಿದರೂ ಸಹ ನಿಮ್ಮ ಸ್ವಲಾಭಕ್ಕೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಕಾಗದ ಪತ್ರಗಳ ಬಗ್ಗೆ ಮಾಹಿತಿ ಮೊದಲ ಬಾರಿಗೆ ಯಾವಾಗ ಬಂದಿರುತ್ತದೆ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಬಂದಾಗ ಅವುಗಳನ್ನು ನೋಡಿದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ 2018 ರಲ್ಲಿ ದಾವೆ ಸಲ್ಲಿಸುವ ಸಂದರ್ಭದಲ್ಲಿ ಸದರಿ ಕಾಗದ ಪತ್ರಗಳ ಬಗ್ಗೆ ಗೊತ್ತಾಗಿರುತ್ತದೆಯ ಎಂದರೆ ಸಾಕ್ಷಿಯು ದಾವೆಯನ್ನು ಸಲ್ಲಿಸಿದ ನಂತರ ನ್ಯಾಯಾಲಯಕ್ಕೆ ಬಂದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಸದರಿ ಕಾಗದ ಪತ್ರಗಳನ್ನು ಬರೆದುಕೊಟ್ಟಿರುವುದಿಲ್ಲ ಎಂದ ಮೇಲೆ ಪ್ರತಿವಾದಿಯ ಸಂಸ್ಥೆಯವರ ವಿರುದ್ಧ ಅತಿಕ್ರಮಣ ಮಾಡಿರುವ ಬಗ್ಗೆ ಹಾಗೂ ದಾಖಲಾತಿಗಳ ಮೇಲೆ ಸಹಿಗಳನ್ನು ಸೃಷ್ಟಿ ಮಾಡಿಕೊಂಡಿದ್ದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದರಾ ಎಂದರೆ ಸಾಕ್ಷಿಯು ಪೋರ್ಜರಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಪೋರ್ಜರಿ ಪ್ರಕರಣದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು

ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲ ದಾಖಲಾತಿಗಳನ್ನೂ ಸಹ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮೂಲ ದಾವಾ ನಂ.101/2018 ರ ಪ್ರತಿವಾದ ಪತ್ರದ ಮೇಲಿರುವ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಮ್ಮದೇ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಪ್ರತಿವಾದಿಯ ಸಂಸ್ಥೆಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ನೀವು ಮೂಲ ದಾವಾ ನಂ.23/2018ನೇದ್ದನ್ನು ದಾಖಲಿಸಿದ್ದು, ಪ್ರತಿವಾದಿಯ ಸಂಸ್ಥೆಯು ಮೂಲ ದಾವಾ ನಂ.101/2018 ನೇದ್ದನ್ನು ದಾಖಲಿಸಿ ನೀವು ಬರೆದುಕೊಟ್ಟಂತಹ ಖರೀದಿ ಕರಾರು ಪತ್ರದ ಮೇರೆಗೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಖರೀದಿ ಕ್ರಯಪತ್ರವನ್ನು ಮಾಡಿಕೊಡಲು ಬಾಧ್ಯಸ್ಥರು ಇರುತ್ತೀರಿ ಎಂದು ಪ್ರತಿವಾದಿಯ ಸಂಸ್ಥೆಯವರು ದಾವೆಯನ್ನು ಸಲ್ಲಿಸಿದ್ದು, ಅದರಂತೆ ಕ್ರಯಪತ್ರವನ್ನು ಮಾಡಿಕೊಡಲು ನೀವು ಭಾಧ್ಯಸ್ಥರು ಇರುತ್ತೀರಿ ಎಂದರೆ ಸರಿಯಲ್ಲ. ಎಲ್ಲ ಶಿಕ್ಷಣ ಇಲಾಖೆಯ ದಾಖಲಾತಿಗಳಲ್ಲಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯ ಸಂಸ್ಥೆಯವರ ಶಾಲೆ ನಡೆಯುತ್ತಿದೆ ಎಂದು ದಾಖಲೆ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ, ಅದರಲ್ಲಿರುವ ಶಾಲೆಯ ಕಟ್ಟಡವನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.